

# ಸ್ವರ್ಣರಶ್ಮಿ ಪ್ರತಿಷ್ಠಾನ (ರಿ.)

# SWARNA RASHMI PRATISTHANA BANGALORE (R)


**(Under the Hon. Presidentship of Srimad Gangadharendra Saraswati Swamiji**
**Sri Sonda Swarnavalli Maha Samsthana, Sirsi)**

Regn. No. 9055-B-1-2022-23 Darpan ID. KA/2026/1021023

# 25-B, 1st Cross, MPM Layout, Mallathahalli Village, Near Nagarabhavi Ring Road, Bengaluru–560056.
Correspondence Address: 'Abhyudaya' Hostel Chikkabettahalli, Bengaluru – 560097 .
Mob. : 9449835287, 9482214395   Email: subrayamhegde@gmail.com


ದಿನಾಂಕ : 12-03-2026

ಮಾನ್ಯರೆ,

ವಿಷಯ : ಸ್ವರ್ಣರಶ್ಮಿ ಕೌಶಲ್ಯಾಭಿವೃದ್ಧಿ ತರಬೇತಿ ಸಂಸ್ಥೆ ನಿರ್ಮಾಣಕ್ಕೆ ಸಹಾಯ ಕೋರಿ
ದಾನಿಗಳೂ ಮತ್ತು ಸದಭಿರುಚಿಯ ಸಮಾಜ ಬಾಂಧವರಿಗೆ ವಿನಮ್ರ ಮನವಿ.

- - - -

ನಮ್ಮ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಪ್ರತಿಭಾವಂತ ಯುವಕರು ಮತ್ತು ವಿದ್ಯಾರ್ಥಿಗಳು ಇದ್ದಾರೆ. ಆದರೆ ಆರ್ಥಿಕ ಪರಿಸ್ಥಿತಿ ಹಾಗೂ ಸೂಕ್ತ ಮಾರ್ಗದರ್ಶನದ ಕೊರತೆಯಿಂದಾಗಿ ಅವರ ಪ್ರತಿಭೆ ಅನೇಕ ಬಾರಿ ಬೆಳಕಿಗೆ ಬರದೇ ಉಳಿಯುತ್ತದೆ.

ಈ ಹಿನ್ನೆಲೆಯಲ್ಲಿ ಪೂಜ್ಯ ಶ್ರೀ ಶ್ರೀಮತ್ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಅವರ ಆಶೀರ್ವಾದ ಮತ್ತು ಮಾರ್ಗದರ್ಶನದಲ್ಲಿ, ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾ ಸಂಸ್ಥಾನದ ಆಶ್ರಯದಲ್ಲಿ ಸ್ವರ್ಣರಶ್ಮಿ ಪ್ರತಿಷ್ಠಾನ (ರಿ.), ಬೆಂಗಳೂರು ಕಳೆದ ಮೂರು ವರ್ಷಗಳಿಂದ ಗ್ರಾಮೀಣ ಪ್ರದೇಶಗಳಲ್ಲಿ ಜಾಗೃತಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

ಪ್ರಸ್ತುತ ನಾವು ಉತ್ತರ ಕನ್ನಡ ಜಿಲ್ಲೆಯ ಶಿರಸಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ನೂರಕ್ಕಿಂತ ಅಧಿಕ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನಾಗರೀಕ ಸೇವಾ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಮಾರ್ಗದರ್ಶನ ಮತ್ತು ತರಬೇತಿ ನೀಡುತ್ತಿದ್ದೇವೆ. ಈ ಮೂಲಕ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ, ರಾಷ್ಟ್ರಭಕ್ತಿ, ನೈತಿಕತೆ ಮತ್ತು ಸಾರ್ವಜನಿಕ ಜೀವನದ ಮೌಲ್ಯಗಳನ್ನು ಬೆಳೆಸುವ ಪ್ರಯತ್ನ ಮಾಡಲಾಗುತ್ತಿದೆ.

**ನಮ್ಮ ಕನಸು**

ಈ ಕಾರ್ಯವನ್ನು ಇನ್ನಷ್ಟು ವಿಸ್ತರಿಸುವ ಉದ್ದೇಶದಿಂದ ಬೆಂಗಳೂರಿನ ನಾಗರಭಾವಿ ವರ್ತುಲ ರಸ್ತೆ ಸಮೀಪದ ಎಂಪಿಎಂ ಬಡಾವಣೆಯಲ್ಲಿ ಸ್ವರ್ಣರಶ್ಮಿ ಕೌಶಲ್ಯಾಭಿವೃದ್ಧಿ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲು ಯೋಜಿಸಲಾಗಿದೆ.

ಈ ಸಂಸ್ಥೆಯಲ್ಲಿ ಯುವಕರಿಗೆ ಕೆಳಗಿನ ಕ್ಷೇತ್ರಗಳಲ್ಲಿ ತರಬೇತಿ ನೀಡಲಾಗುತ್ತದೆ:

- ಕೃತಕ ಬುದ್ಧಿಮತ್ತೆ (Artificial Intelligence) ಮತ್ತು Machine Learning
- ಸೈಬರ್ ಸುರಕ್ಷತೆ (Cyber Security)
- ಫಿನ್‌ಟೆಕ್ ಮತ್ತು ಕಂಪ್ಯೂಟರ್ ತಂತ್ರಜ್ಞಾನ
- ಎಲೆಕ್ಟ್ರಾನಿಕ್ಸ್ ಮತ್ತು ತಾಂತ್ರಿಕ ಕೌಶಲ್ಯಗಳು
- ವ್ಯಕ್ತಿತ್ವ ಅಭಿವೃದ್ಧಿ ಮತ್ತು ಸಾಫ್ಟ್ ಸ್ಕಿಲ್ಸ್
- ಗ್ರಾಮೀಣ ಮತ್ತು ಬಡ ವಿದ್ಯಾರ್ಥಿನಿಯರಿಗೆ ವೃತ್ತಿಪರ ತರಬೇತಿ

ಗ್ರಾಮೀಣ ಮತ್ತು ದೂರದ ಪ್ರದೇಶಗಳಿಂದ ಬರುವ ವಿದ್ಯಾರ್ಥಿನಿಯರಿಗಾಗಿ ವಸತಿ ಸೌಲಭ್ಯ (ಹಾಸ್ಟೆಲ್) ಕೂಡ ಯೋಜಿಸಲಾಗಿದೆ.

**ಯೋಜನೆಯ ವಿವರ**

ಈ ಸಂಸ್ಥೆಯ ಕಟ್ಟಡವು ನೆಲಮಹಡಿ + ಮೂರು ಮಹಡಿಗಳಾಗಿದ್ದು ಇದರಲ್ಲಿ ಈ ಕೆಳಗಿನ ಸೌಲಭ್ಯಗಳು ಇರುತ್ತವೆ.

- ತರಗತಿ ಕೊಠಡಿಗಳು ಮತ್ತು ತರಬೇತಿ ಕೇಂದ್ರಗಳು
- ಕಂಪ್ಯೂಟರ್ ಮತ್ತು ತಂತ್ರಜ್ಞಾನ ಪ್ರಯೋಗಾಲಯಗಳು
- ಗ್ರಂಥಾಲಯ ಮತ್ತು ಡಿಜಿಟಲ್ ಅಧ್ಯಯನ ಕೇಂದ್ರ
- ವಿದ್ಯಾರ್ಥಿನಿಯರಿಗಾಗಿ ವಸತಿ ವ್ಯವಸ್ಥೆ

ಪು.ತಿ.ನೋ.

ಯೋಜನೆಯ ಒಟ್ಟು ಅಂದಾಜು ವೆಚ್ಚ ರೂ. 3 ಕೋಟಿಯಾಗಿದ್ದು ಈ ಮಹತ್ವದ ಶೈಕ್ಷಣಿಕ ಹಾಗೂ ಸಾಮಾಜಿಕ ಕಾರ್ಯಕ್ಕೆ ದಾನಿಗಳು, ಉದ್ಯಮಿಗಳು, ವೃತ್ತಿಪರರು ಹಾಗೂ ಸಮಾಜಬಾಂಧವರು ತಮ್ಮ ಸಹಕಾರವನ್ನು ನೀಡುವಂತೆ ನಮ್ರವಾಗಿ ವಿನಂತಿಸುತ್ತೇವೆ. ನಿಮ್ಮ ದಾನದಿಂದ ಅನೇಕ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆಧುನಿಕ ಕೌಶಲ್ಯಗಳು, ಆತ್ಮವಿಶ್ವಾಸ ಮತ್ತು ಗೌರವಯುತ ಜೀವನೋಪಾಯದ ಅವಕಾಶಗಳು ದೊರೆಯುತ್ತವೆ. ಈ ಕಟ್ಟಡ ನಿರ್ಮಾಣಕ್ಕೆ ನೀಡುವ ಸಹಾಯವು ಕೇವಲ ಒಂದು ದಾನವಲ್ಲ, ಅದು ಭವಿಷ್ಯದ ಅನೇಕ ಯುವಕರ ಬದುಕನ್ನು ರೂಪಿಸುವ ಮಹತ್ವದ ಹೂಡಿಕೆ ಆಗಿದೆ.

**ದಾನಿಗಳ ಗೌರವಾರ್ಥ ನಾಮಕರಣ ಅವಕಾಶಗಳು :**

| **ದೇಣಿಗೆ ಮೊತ್ತ** | **ಗೌರವ ನಾಮಕರಣ** |
|---|---|
| ರೂ. 1 ಕೋಟಿ ಮತ್ತು ಹೆಚ್ಚು | 1 ಮಹಡಿ / ವಿದ್ಯಾರ್ಥಿನಿಯರ ಹಾಸ್ಟೆಲ್ ವಿಭಾಗ |
| ರೂ. 50 ಲಕ್ಷ | ತಂತ್ರಜ್ಞಾನ ಪ್ರಯೋಗಾಲಯ (AI / Cyber Security Lab) |
| ರೂ. 25 ಲಕ್ಷ | ತರಗತಿ ಕೊಠಡಿ / ತರಬೇತಿ ಸಭಾಂಗಣ |
| ರೂ. 15 ಲಕ್ಷ | ಸೆಮಿನಾರ್ ಹಾಲ್ / ಸಭಾಂಗಣ |
| ರೂ. 10 ಲಕ್ಷ | ಗ್ರಂಥಾಲಯ / ಡಿಜಿಟಲ್ ಅಧ್ಯಯನ ಕೇಂದ್ರ |
| ರೂ. 5 ಲಕ್ಷ | ಕಂಪ್ಯೂಟರ್ ತರಬೇತಿ ಘಟಕ |
| ರೂ. 2 ಲಕ್ಷ | 10 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ |
| ರೂ. 1 ಲಕ್ಷ | 5 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ |

ದಾನಿಗಳ ಹೆಸರನ್ನು ಸಂಸ್ಥೆಯ ಕಟ್ಟಡದಲ್ಲಿ ಹಾಗೂ ಪ್ರತಿಷ್ಠಾನದ ದಾಖಲೆಗಳಲ್ಲಿ ಗೌರವದಿಂದ ದಾಖಲಿಸಲಾಗುತ್ತದೆ.

**ಬನ್ನಿ ಒಟ್ಟಾಗಿ ಭವಿಷ್ಯ ನಿರ್ಮಿಸೋಣ**

ಸಮಾಜದ ಸಹಕಾರದಿಂದ ಮಹಾನ್ ಸಂಸ್ಥೆಗಳು ನಿರ್ಮಾಣವಾಗುತ್ತವೆ. ನಮ್ಮ ಯುವಕರಿಗೆ ಉತ್ತಮ ಭವಿಷ್ಯವನ್ನು ಕಟ್ಟಿಕೊಡುವ ಈ ಕಾರ್ಯದಲ್ಲಿ ನಿಮ್ಮ ಸಹಕಾರವನ್ನು ಹೃತ್ಪೂರ್ವಕವಾಗಿ ಕೋರುತ್ತೇವೆ.

ವೆಬ್ಸೈಟ್ : http://swarnarashmiias.com

ಬ್ಯಾಂಕ ಖಾತೆ ವಿವರ :

| | |
|---|---|
| **Name** | Swarna Rashmi Prathisthana |
| **Bank Name** | Karnataka Bank |
| **Branch** | Vidyaranyapura - Bangalore |
| **Account Number** | 1232000100072901 |
| **Account Type** | Current Account |
| **IFSC Code** | KARB0000123 |

ಸಂಪರ್ಕ :
ಇ-ಮೇಲ್ : subrayamhegde@gmail.com
ಮೊಬೈಲ್ : 94498 35287 / 94822 14395

ಧನ್ಯವಾದಗಳು

ಸುಬ್ರಾಯ ಎಂ. ಹೆಗಡೆ
ಕಾರ್ಯಾಧ್ಯಕ್ಷರು
**ಸ್ವರ್ಣರಶ್ಮಿ ಪ್ರತಿಷ್ಠಾನ (ರಿ.),** ಬೆಂಗಳೂರು

ಇವರಿಗೆ,